ಅಧ್ಯಕ್ಷರು,— ವಿಷಯ ಇಲ್ಲಿಗೆ ಮುಕ್ತಾಯವಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು,— ಸರ್ಕಾರದವರು ಉತ್ತರ ಹೇಳಿದ್ದಾರೆ. ಚರ್ಚೆ ಇಲ್ಲಿಗೆ ಮುಕ್ತಾಯವಾಗಿದೆ.

Nothing will go on record.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೇ...

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ಪುನಃ ಪುನಃ ಎಂದು ಇಲ್ಲಿಯವರೆವಿಗೂ ಎರಡು ಗಂಟೆ ಮಾತನಾಡಿದ್ದಾರೆ...

ಅಧ್ಯಕ್ಷರು.— ಆ ವಿಷಯ ಮುಕ್ತಾಯವಾಗಿದೆ.

ಶ್ರೀ ಕೆ. ಬಿ. ಮಲ್ಲಪ್ಪ.— ಪುನಃ ಹಿಂದಕ್ಕೇ ತಾವು ಹೋಗುತ್ತಿದ್ದೀರಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇದು ಎರಡು ಗಂಟೆ ಕಾಲ ನಡೆಯುವ ಚರ್ಚೆ ಅಲ್ಲ, ಇದು ಸಾಯಂಕಾಲದವರೆಗೂ ನಡೆಯುತ್ತದೆ.

(ಗೊಂದಲ)

ಅಧ್ಯಕ್ಷರು.— ನಾಗರತ್ನಮ್ಮನವರೇ ದಯವಿಟ್ಟು ಕೂಡ್ರಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಧ್ಯಕ್ಷರೇ, ಇದು ನಮ್ಮ ದೇವೇಗೌಡರ ಗೌರವವನ್ನು ಕಾಪಾಡತಕ್ಕಂಥ ವಿಚಾರ ಇದು. ನಾವು ಕೇಳುವಂಥ ರಿಪೋರ್ಟನ್ನು ಮಂಡನೆ ಮಾಡಬೇಕು ಎಂದು ಕೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಅಗೌರವ ಸೂಚಿಸಿ ಮೇಲಿನ ಮನೆಯಲ್ಲಿ ಇಟ್ಟಾದ ನಂತರವೇ ಇಲ್ಲಿ ಇಡುತ್ತೇವೆ ಎಂದು ಹೇಳಿದ್ದಾರೆ. ಈ ಮನೆಯ ವಿಚಾರವೇ ಬೇರೆ, ಮೇಲ್ಮನೆಯ ವಿಚಾರವೇ ಬೇರೆ. ನಾಳೆ ಮೇಲ್ಮನೆಯಲ್ಲಿ ಈ ವಿಚಾರವನ್ನು ಇಟ್ಟರೆ ಪಾಪ ಅವರಿಬ್ಬರೂ ಅಲ್ಲಿಗೆ ಹೋಗಿ ಹೇಳುವಂಥದಕ್ಕೆ ಸಾಧ್ಯ ಇಲ್ಲ. ಇದು ನಮಗೆಲ್ಲ ಗೊತ್ತಾಗಬೇಕಾದ ವಿಚಾರವಾದುದರಿಂದ ನಾವು ಆ ಕಡೆಯಿಂದ ಏನು ಉತ್ತರ ಕೇಳಿದ್ದೇವೆ, ಇದಲ್ಲದೇ ತಮಗೆ ಹಾಗೂ ಈ ಸಭೆಗೆ ಅವರು ಅಗೌರವವನ್ನು ಸೂಚಿಸಿರುವುದರಿಂದ ನಾವು ರಿಪೋರ್ಟನ್ನು ಇಲ್ಲಿ ಇಡಲೇಬೇಕು ಎಂದು ಒತ್ತಾಯಪಡಿಸಿ ಅವರು ಇಡುವುದಿಲ್ಲ ಎಂದು ಹೇಳಿರುವುದರಿಂದ ಈ ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ.

(ಈ ಸಮಯದಲ್ಲಿ ಕಾಂಗ್ರೆಸ್– (ಐ) ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಕೆ. ಬಿ. ಮಲ್ಲಪ್ಪ.— ಇದನ್ನು ಮಾಡುವುದಕ್ಕೆ ಎರಡು ಗಂಟೆಯನ್ನು ತೆಗೆದುಕೊಂಡ್ರಾ ?

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ — ನಮಗೆ ಹೇಳುವುದಕ್ಕೆ ಬರುತ್ತಾರೆ, ನಿಮಗೆ ನಾಚಿಕೆಯಾಗ ಬೇಕು.

(ಗೊಂದಲ)

ಅಧ್ಯಕ್ಷರು.— ಆಯಿತು ಬಿಡಿ. ಚಂದ್ರಶೇಖರ್‌ರವರೇ ತಾವು ಸ್ಟೇಟ್‌ಮೆಂಟ್‌ನ್ನು ಓದ್ರಿ.

ಶ್ರೀ ಎಂ. ಚಂದ್ರಶೇಖರ್,— ಹುಬ್ಬಳ್ಳಿ—ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ನಳದಲ್ಲಿ ಹುಳುಗಳಂ..

ಶ್ರೀ ರಮೇಶ್‌ಕುಮಾರ್.— ಅಧ್ಯಕ್ಷರೇ, ನಾನು ಆಗಿನಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ನಿಮ್ಮನ್ನು ಗಮನ ಸೆಳೆಯುವುದಕ್ಕೆ ಆಗಿಲ್ಲ. ಉಪನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ

---

* ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.

ಒಂದೂ ವಿಷಯವನ್ನು ಪ್ರಸ್ತಾಪ ಮಾಡಿದರು. ಅದು ಏನೆಂದರೆ ''ಸನ್ಮಾನ್ಯ ಮುಖ್ಯಮಂತ್ರಿಗಳು ಪೋಲೀಸರ ಮೇಲೆ ಒತ್ತಡ ತಂದು ಶ್ರೀಮಾನ್ ಜೀವಿಜಯ ಮಂತ್ರಿತರರು ಭನ್ನಮತೀಯರು, ಆದುದರಿಂದ ರಿಪೋರ್ಟನ್ನು ತರಿಸಿಕೊಂಡಿದ್ದಾರೆ ಎಂದು ಜೀವಿಜಯ ಅವರು ಹೇಳಿದ್ದಾರೆ ಎಂದು''. ಅವರು ಪ್ರಸ್ತಾಪ ಮಾಡಿದ್ದಾರೆ, ಆದರೆ, ಶ್ರೀಮಾನ್ ಜೀವಿಜಯ ಅವರು ಅಂಥ ಮಾತನ್ನು ಹೇಳಲಿಲ್ಲ ಚರ್ಚೆಯ ವೇಳೆಯಲ್ಲಿ ಶ್ರೀಮಾನ್ ಖಿರ್ಗೆಯವರು ಹೇಳಿರತಕ್ಕಂಥದ್ದು ಕಡತಕ್ಕೆ ಹೋಗಿದೆ. ಆ ಕಡತವನ್ನು ತರಿಸಿಕೊಂಡು ವೆರಿಫೈ ಮಾಡಿ. ಇದು ನಿಜಕ್ಕೂ ದೂರವಾದ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್,— ಅದನ್ನು ಜೀವಿಜಯ ಅವರೇ ಹೇಳಬೇಕು, ಅವರು ಸುಮ್ಮನೆ ಕುಳಿತಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಚಂದ್ರಶೇಖರ್‌ರವರೇ, ತಾವು ಸ್ಟೇಟ್‌ಮೆಂಟ್‌ನ್ನು ಓದ್ರಿ.

ಮಾನ್ಯ ಮಂತ್ರಿಗಳ ಹೇಳಿಕೆ

ಹುಬ್ಬಳ್ಳಿ—ಧಾರವಾಡ ಮಹಾನಗರದ ಕುಡಿಯುವ ನೀರಿನ ನಳದಲ್ಲಿ ಹುಳುಗಳು ಮೇಲಿಂದ ಮೇಲೆ ಬರುತ್ತಿರುವ ವಿಷಯದ ಬಗ್ಗೆ

ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ಈ ವಿಷಯದ ಬಗ್ಗೆ ತಾರೀಖು ೧೦-೬-೧೯೮೮ರಂದು ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪವಾದಾಗ ಮಂಡಲಿಯ ನಿರ್ವಾಹಕ ನಿರ್ದೇಶಕರ ವರದಿ ಪ್ರಕಾರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಸ್ಥಳೀಯ ಅಧಿಕಾರಿಗಳು 'ನಲ್ಲಿ ನೀರಿನಲ್ಲಿ ಹುಳುಗಳು ಬರುತ್ತಿವೆ' ಎಂಬ ವರದಿಯು ಪತ್ರಿಕೆಯಲ್ಲಿ ಬಂದಾಗ, ಕೂಡಲೆ ಹುಬ್ಬಳ್ಳಿ ಧಾರವಾಡ ನಗರ ಸಭೆಯ ಮೇಯರ್, ಆಯುಕ್ತರು ಮತ್ತು ಮಹಾನಗರಪಾಲಿಕೆಯ ಕಾರ್ಯಪಾಲಕ ಅಭಿಯಂತರು, ಮಂಡಲಿಯ ಕಾರ್ಯಪಾಲಕ ಅಭಿಯಂತರ ಜೊತೆ ಕಣವಿ ಹೊನ್ನಾಪುರದಲ್ಲಿ ಷಿ-೬-೧೯೮೮ರಂದು ಜಂಟಿ ಸಂದರ್ಶನ ಮಾಡಿ, ಕಣವಿ ಹೊನ್ನಾಪುರದ ಪ್ರತಿ ಫಿಲ್ಟರ್‌ನಿಂದ ಸೋಸಿ ಬರುವ ನೀರನ್ನು ಗ್ಲಾಸ್‌ಬೀಕರ್‌ನಲ್ಲಿ ಐದಾರಂಬಾರಿ ತೆಗೆದು ನೋಡಲಾಗಿ, ಅದರಲ್ಲಿ ಯಾವ ಹುಳುಗಳೂ ಮತ್ತು ಕಲ್ಮಷವೂ ಇರದಿರುವುದನ್ನು ನೋಡಿದ್ದಾರೆಂದೂ, ನೀರಸಾಗರದಿಂದ ಬರುವ ನೀರನ್ನೂ ಸಹ ಇರೇಷನ್ ಪೌಂಟನ್‌ನಲ್ಲಿ ಹಿಡಿದು ನೋಡಿದಾಗ ಯಾವ ಹುಳುಗಳೂ ಕಂಡಬಂದಿಲ್ಲವೆಂದೂ, ಅಲ್ಲದೆ, ಗೋಕುಲಕ್ಕೆ ಹೋಗುವ ಸಂಪಿನಲ್ಲಿ ನೀರಸಾಗರದ ಕೊಳವೆ ಮೂಲಕ ಬರುವ ನೀರನ್ನು ಹಿಡಿದು ನೋಡಿದಾಗ ಅದರಲ್ಲಿಯೂ ಯಾವ ಹಳ್ಳಿಗಳೂ ಕಾಣಬರಲಿಲ್ಲ ಎಂದು ನಾನು ಹೇಳಿಕೆ ಕೊಟ್ಟಿದ್ದೆ. ಅಲ್ಲದೆ, ಹುಳುಗಳ ನಿರ್ಮಾಣಕ್ಕೆ ಕೆಳಕಂಡ ಸಾಧ್ಯಾಸಾಧ್ಯತೆಗಳು ಇರಬಹುದೆಂದು ತಿಳಿಸಲಾಯಿತು.

ಅ) ನೀರು ವಿತರಣೆ ಮಾಡುವ ಕೆಲವು ಸ್ಥಳಗಳಲ್ಲಿ ಗುಂಡಿಗಳನ್ನು ತೆಗೆದು ಗುಂಡಿಗಳಲ್ಲೇ ಕೊಡಗಳನ್ನಿಟ್ಟು ನೀರಂ ತುಂಬಿಕೊಳ್ಳುತ್ತಾರೆ. ಗುಂಡಿಯಲ್ಲಿ ಕೊಡದಿಂದ ಹೊರಸೂಸಿದ ನೀರು ನಿಂತು, ಮಲೆತು ಸೊಳ್ಳೆಗಳ ಬೆಳವಣಿಗೆಗೆ ಅನುಕೂಲವಾದ ಸ್ಥಳ ನಿರ್ಮಾಣವಾಗುವ ಸಾಧ್ಯತೆ ಇದೆ. ಈ ಅಶುದ್ಧ ನೀರು ವಿತರಣಾಕೊಳವೆಗಳಲ್ಲಿ ಗುರುತ್ವಾಕರ್ಷಣೆಯಿಂದ ಪ್ರವೇಶಿಸಲು ಸಾಧ್ಯ.

ಬ) ಕೆಲವು ಕಡೆ ಒಳಚರಂಡಿ ಪೈಪುಗಳು ಹಾಗೂ ಕುಡಿಯುವ ನೀರಿನ ಪೈಪುಗಳು ಜೊತೆ ಜೊತೆಯಾಗಿಯೇ ಇದ್ದು, ಇವು ಒಡೆದು ಒಳಚರಂಡಿಯ ಅಶುದ್ಧ ನೀರು ಕುಡಿಯುವ ನೀರಿನ ಪೈಪಿನಲ್ಲಿ ಪ್ರವಹಿಸುವ ಸಾಧ್ಯತೆಯೂ ಇದೆ.

೨. ಈ ಹಿಂದೆ ದಿನಾಂಕ ೭-೬-೧೯೮೮ರ ಪ್ರಜಾವಾಣಿ ಪತ್ರಿಕೆಯಲ್ಲಿ ''ಹುಬ್ಬಳ್ಳಿ ಧಾರವಾಡಗಳ ನಲ್ಲಿ ನೀರಿನಲ್ಲಿ ಹುಳು'' ಎಂಬ ಶೀರ್ಷಿಕೆಯುಡಿ, ಹಲವಾರು ದಿನಗಳಿಂದ ಹುಬ್ಬಳ್ಳಿ ನಗರದಲ್ಲಿ ಹುಳು ಮಿಶ್ರಿತ ಕುಡಿಯುವ ನೀರು ಸರಬರಾಜಾಗುತ್ತಿದೆ ಎಂಬ ಬಗ್ಗೆ ತಿಳಿದು ತಕ್ಷಣ ಮಂಡಲಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ, ಈ ಬಗ್ಗೆ ಜರೂರು ವರದಿ ಸಲ್ಲಿಸಲು ಕೋರಲಾಯಿತು. ಹುಬ್ಬಳ್ಳಿ ಧಾರವಾಡ ಮಂಡಲಿ ಅಧಿಕಾರಿಗಳು, ವರದಿ ಸಲ್ಲಿಸುವ ಮುಂಚೆ ಪತ್ರಿಕೆಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿರುತ್ತಾರೆ.

''ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಜಲಮಂಡಲಿ. ಕಲುಷಿತ ನೀರು ಪೂರೈಸುತ್ತಿಲ್ಲ. ನೀರು ಸೋಸುವಲ್ಲಿ ಎಲ್ಲಾ ಸುರಕ್ಷತಾ ಹಾಗೂ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನೀರು ಸೋಸುವ ಮುಂಚೆ ಹಾಗೂ ನಂತರ, ಎರಡೆರಡು ಸಲ ನೀರಿಗೆ ಕ್ಲೋರಿನ್ ವಿಶ್ರಮಾಡಲಾಗುತ್ತಿದೆ. ಸೋಸಿದ ನಂತರವೇ ನೀರು ಪೂರೈಸಲಾಗುತ್ತಿದೆ. ಒಳಚರಂಡಿ ಪೈಪುಗಳು ಕುಡಿಯುವ ನೀರಿನ ಪೈಪು ಜೊತೆ ಇರುವುದರಿಂದ, ಕೆಲವೆಡೆ ಕುಡಿಯುವ ನೀರಿನಲ್ಲಿ ಹುಳುಗಳು ಸೇರಿಕೊಂಡಿರುವ ಸಾಧ್ಯತೆ ಇದೆ.

೩. ಈ ಬಗ್ಗೆ ಪರಿಷತ್ತಿನಲ್ಲಿ ಚರ್ಚೆ ನಡೆದ ಮೇಲೆ ವಿಷಯ ತುಂಬಾ ಗಂಭೀರವಾದ್ದರಿಂದ, ಖುದ್ದಾಗಿ ಪರಿಶೀಲಿಸಲು ಮಂಡಲಿಯ ಮುಖ್ಯ ಅಭಿಯಂತರರು ದಿನಾಂಕ ೧೧ ಮತ್ತು ೧೨-೬-೧೯೮೮ ರಂದು ಹುಬ್ಬಳ್ಳಿ-ಧಾರವಾಡದ ನೀರಸಾಗರ ಜಲಾಶಯಕ್ಕೆ, ಮಂಡಲಿಯ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರೊಡನೆ ಭೇಟಿ ಕೊಟ್ಟಿರುತ್ತಾರೆ. ಮತ್ತು ನೀರು ಶುದ್ಧೀಕರಣಾಗಾರಕ್ಕೆ ಭೇಟಿಕೊಡುವ ಮೊದಲು, ಮಾನ್ಯ ಕಂದಾಯ ಸಚಿವರು ಕರೆದಿದ್ದ ನಗರಸಭೆ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿದ್ದಾರೆ. ಕಂದಾಯ ಸಚಿವರು, ಮಂಡಲಿ ಅಧಿಕಾರಿಗಳು, ನೌಕರರು ಹಾಗೂ ನಗರಸಭೆ ಅಧಿಕಾರಿಗಳೊಂದಿಗೆ, ೧೨ನೇ ತಾರೀಖು ಸದರಿ ಶುದ್ಧೀಕರಣಾಗಾರಕ್ಕೆ ಭೇಟಿಕೊಟ್ಟಿರುವರು.

೪. ನೀರಸಾಗರ ಶುದ್ಧೀಕರಣಾಗಾರಕ್ಕೆ ಭೇಟಿಕೊಟ್ಟಾಗ, ಶುದ್ಧೀಕರಣಾಗಾರದ ಗೋಡೆಯ ಮೇಲೆ ಮತ್ತು ನೀರಿನಲ್ಲಿ ಸೊಳ್ಳೆಗಳು ಮುತ್ತಿಕೊಂಡಿದ್ದು ಕಂಡುಬಂದವೆಂದೂ, ಸೊಳ್ಳೆಗಳ-ಲಾರ್ವಾಗಳು ಸಹ ದೊಡ್ಡ ಸಂಖ್ಯೆಯಲ್ಲಿ ಶುದ್ಧೀಕರಣಾಗಾರದ ಅನೇಕ ಕಡೆಗಳಲ್ಲಿ ಬೆಳೆದಿದ್ದು ಕಂಡು ಬಂತೆಂದು, ಮಂಡಲಿಯ ಮುಖ್ಯ ಅಭಿಯಂತರರು ಸ್ವೀಕರಿಸಿದ್ದಾರೆ. ಕಂದಾಯ ಸಚಿವರು ಮಂಡಲಿಯ ಅಧಿಕಾರಿಗಳ ಜೇಜವಾಬ್ದಾರಿ ಬಗ್ಗೆ ಕ್ರಮ ತೆಗೆದುಕೊಳ್ಳುವ ದಿಶೆಯಲ್ಲಿ ಜಿಲ್ಲಾಧಿಕಾರಿಗಳಿಗೆ ತನಿಖೆಮಾಡಿ, ಒಂದು ತಿಂಗಳಲ್ಲಿ ವರದಿಕೊಡಲು ತಿಳಿಸಿದ್ದಾರೆ.

೫. ಈಗಾಗಲೆ ಸೊಳ್ಳೆಗಳನ್ನು ಮತ್ತು ಲಾರ್ವಾಗಳನ್ನು ನಿರ್ಮೂಲ ಮಾಡಲು ಶುದ್ಧೀಕರಣಾಗಾರದ ಎಲ್ಲಾ ಸ್ಥಳಗಳನ್ನು ಸ್ವಚ್ಛ ಮಾಡಿ ಬ್ಲೀಚಿಂಗ್ ಪೌಡರ್ ಹಾಕಿದೆ. ಶುದ್ಧೀಕರಣಾ ಕಟ್ಟಡದ ಮೇಲ್ಚಾವಣಿ ಗೋಡೆಗಳ ಮೇಲೆ ಕಂಡಿತಂತಹ ಸೊಳ್ಳೆಗಳನ್ನು ಕೊಲ್ಲಲು ರಾಸಾಯನಿಕ ದ್ರವವನ್ನು ಸಿಂಪಡಿಸಲಾಗಿದೆ. ಶುದ್ಧೀಕರಿಸಿದ ಜಲಸಂಗ್ರಹಾಗಾರ ಕಣವಿ ಹೊನ್ನಾಪುರದಿಂದ-ಹುಬ್ಬಳ್ಳಿಯವರೆಗೆ ಇರುವ ೬೦೦ ಮಿ.ಮಿ. ಗಾತ್ರದ ಗುರುತ್ವಾಕರ್ಷಣ ಕೊಳವೆಯನ್ನು ಫ್ಲಶ್‌ಮಾಡಲಾಗಿದೆ. ಇದೇ ರೀತಿ ಎಲ್ಲ ಸ್ಥಳಗಳನ್ನು ಶುದ್ಧಗೊಳಿಸಿ, ಬ್ಲೀಚಿಂಗ್ ಪೌಡರ್ ಅಥವಾ ಕ್ಲೋರಿನ್ ಗ್ಯಾಸ್ ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಲು ವ್ಯವಸ್ಥೆ ಮಾಡಲಾಗಿದೆ.

೬. ಈ ಪರಿಸ್ಥಿತಿಯ ಬಗ್ಗೆ ಮಂಡಲಿಯ ಮುಖ್ಯ ಅಭಿಯಂತರ ವರದಿಯ ಪ್ರಕಾರ ಮಂಡಲಿಯ ನಿರ್ವಾಹಕ ನಿರ್ದೇಶಕರಿಗೆ ತಪ್ಪು ಮಾಹಿತಿ ನೀಡಿದ ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಮತ್ತು ನೇರ ಜವಾಬ್ದಾರಿಯಾದವರನ್ನು ಅಮಾನತ್ತಿನಲ್ಲಿಡಲು ಆದೇಶ ಮಾಡಲಾಗಿದೆ. ಈಗಾಗಲೇ ಒಬ್ಬ ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿ ಇಡಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ : ಕ್ರಮ ಸಂಖ್ಯೆ : ೩೧, ೬೨, ೧೪, ೨೯ ಮತ್ತು ೪೪, ವೈದ್ಯಕೀಯ ಸೇವೆ, ಕುಟುಂಬ ಕಲ್ಯಾಣ ಜನಾರೋಗ್ಯ ಇಲಾಖೆ, ಕಾರ್ಮಿಕ ವಾರ್ತಾ ಪ್ರಸಾರೋದ್ಯಮ, ಬಿ.ಡಿ.ಎ. ಪಶುಸಂಗೋಪನೆ, ಗೃಹ ಮಂಡಳಿ ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ.

೧-೩೦ ಪಿ. ಎಂ.

ಅಧ್ಯಕ್ಷರು.—ಈಗ ಬೇಡಿಕೆ ಕ್ರಮಾಂಕ ೩೧ನ್ನು ಮಾನ್ಯ ಆರೋಗ್ಯ ಮಂತ್ರಿಗಳು ಮಂಡಿಸುವುದು.

ಅಭಿಯಾಚನೆ ಕ್ರಮಾಂಕ : ೩೧-ವೈದ್ಯಕೀಯ ಸೇವೆ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ.